ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ತಾಂ.ಶಿ.ಇ 05 ಸಿಡಿಸಿ(1) 2024 (ಕ.ನಂ.1314612)

ಆಯುಕ್ತರ ಕಛೇರಿ
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:13/01/2025.

## ಸುತ್ತೋಲೆ

ವಿಷಯ: ರಾಜ್ಯದ ಪಾಲಿಟೆಕ್ನಿಕ್ ಡಿಪ್ಲೊಮಾ ಪ್ರೋಗ್ರಾಂಗಳಿಗೆ 2025-26ನೇ ಸಾಲಿನಿಂದ ಅಳವಡಿಸಲು ಉದ್ದೇಶಿಸಲಾದ C-25 ಕರಡು ಪಠ್ಯಕ್ರಮಗಳ ಬಗ್ಗೆ

ಮೇಲ್ಕಂಡ ವಿಷಯದ ಬಗ್ಗೆ, 2025-26ನೇ ಶೈಕ್ಷಣಿಕ ಸಾಲಿನಿಂದ ರಾಜ್ಯದ ಪಾಲಿಟೆಕ್ನಿಕ್ ಡಿಪ್ಲೊಮಾ ವ್ಯಾಸಂಗದಲ್ಲಿ ಪರಿಷ್ಕೃತ ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳಲು ಉದ್ದೇಶಿಸಿದ್ದು, ಸದರಿ ವಿಷಯವಾಗಿ ವಿಷಯ ತಜ್ಞರು, NITTTR ಸಂಸ್ಥೆ ಹಾಗೂ ವಿವಿಧ ಔದ್ಯೋಗಿಕ ಕ್ಷೇತ್ರಗಳ ಪರಿಣಿತರ ಸಹಯೋಗದಿಂದ ಪ್ರೋಗ್ರಾಂವಾರು ಮೊದಲನೇ ಮತ್ತು ಎರಡನೇ ವರ್ಷ ಡಿಪ್ಲೊಮಾ ವ್ಯಾಸಂಗದ ಕರಡು ಪಠ್ಯಕ್ರಮಗಳನ್ನು ಸಿದ್ದಪಡಿಸಿ ಇಲಾಖೆಯ ಅಂತರಜಾಲ (https://dtek.karnataka.gov.in) ನಲ್ಲಿ ಪ್ರಕಟಿಸಲಾಗಿದೆ. ಸಂಬಂಧಪಟ್ಟ ಪ್ರೋಗ್ರಾಂಗಳ ವಿಷಯ ಪರಿಣಿತರಿಂದ , ಉಪನ್ಯಾಸಕರಿಂದ ಮತ್ತು ಹಳೆ ವಿದ್ಯಾರ್ಥಿಗಳಿಂದ ಇಲಾಖೆಯ ಅಂತರಜಾಲದಲ್ಲಿ ಪ್ರಕಟಿಸಿರುವ ಕರಡು ಪಠ್ಯಕ್ರಮಗಳ ಬಗ್ಗೆ ವಸ್ತುನಿಷ್ಠ ಅಭಿಪ್ರಾಯಗಳನ್ನು ಕೋರಿದ್ದು, ಈ ಕೆಳಕಂಡ ಗೂಗಲ್ ಲಿಂಕ್ ಮುಖಾಂತರ ಅಭಿಪ್ರಾಯಗಳನ್ನು ದಿನಾಂಕ:31/01/2025ರ ಒಳಗೆ ಸಲ್ಲಿಸಲು ಕೋರಿದೆ.

https://forms.gle/cenYqr2mSGrQVxfg6

ಆಯುಕ್ತರು

ಇವರಿಗೆ:

ರಾಜ್ಯದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ: ಸಂಸ್ಥೆಯಲ್ಲಿನ ಎಲ್ಲ ಉಪನ್ಯಾಸಕರುಗಳ ಗಮನಕ್ಕೆ ತರಲು ಮತ್ತು ಅಭಿಪ್ರಾಯಗಳನ್ನು ಸಲ್ಲಿಸುವಲ್ಲಿ ಸೂಕ್ತ ಕ್ರಮ ಕೈಗೊಳ್ಳಲು.